ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/ಶೈವಿ/100/ರಾ.ಸೇ.ಯೋ/2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು,ದಿನಾಂಕ:05.08.2017

# ಸುತ್ತೋಲೆ

**ವಿಷಯ:** ರಾಷ್ಟ್ರೀಯ ಸೇವಾ ಯೋಜನೆಯನ್ನು ಎಲ್ಲಾ ಕಾಲೇಜುಗಳಲ್ಲಿ ಕಡ್ಡಾಯಗೊಳಿಸುವ ಬಗ್ಗೆ.

**ಉಲ್ಲೇಖ:**
1. ಉನ್ನತ ಶಿಕ್ಷಣ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ:ಇಡಿ/ 11/ವಿವಿಧ/2015. ಬೆಂಗಳೂರು, ದಿನಾಂಕ04.05.2015.
2. ರಾಷ್ಟ್ರೀಯ ಸೇವಾ ಯೋಜನಾ ಕೋಶ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಇವರ ಸುತ್ತೋಲೆ ಸಂಖ್ಯೆ:ಯುಸೇಇ/ರಾಸೇಯೋ/15/2015-16/96, ದಿನಾಂಕ:31.07.2015,
3. ರಾಜ್ಯ ಎನ್.ಎಸ್.ಎಸ್. ಅಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ ರಾಷ್ಟ್ರೀಯ ಸೇವಾ ಯೋಜನಾ ಕೋಶ, ಇವರ ಪತ್ರ ಸಂಖ್ಯೆ: ಯುಸೇಇ/ ರಾಸೇಯೋ/ ಸಾಮಾನ್ಯ/2017-18/145, ದಿನಾಂಕ:14.07.2017.

*****

ಭಾರತ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ನಿರ್ದೇಶನದನ್ವಯ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖಾ ವ್ಯಾಪ್ತಿಯ ಎಲ್ಲಾ ಕಾಲೇಜುಗಳಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಘಟಕಗಳನ್ನು ಕಡ್ಡಾಯಗೊಳಿಸಿ ವಿದ್ಯಾರ್ಥಿಗಳಿಂದ ಸಂಗ್ರಹಿಸಬೇಕಾದ ಶುಲ್ಕ ಹಾಗೂ ವಿನಿಯೋಗದ ಬಗ್ಗೆ ಮಾರ್ಗದರ್ಶನಗಳನ್ನು ನೀಡಲಾಗಿತ್ತು. ಆದಾಗ್ಯೂ ಹಲವಾರು ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿ ಶುಲ್ಕ ಸಂಗ್ರಹ ಮಾಡಿದರೂ ಘಟಕಗಳನ್ನು ಪ್ರಾರಂಭಿಸಿರುವುದಿಲ್ಲ. ಆದ್ದರಿಂದ ತುರ್ತಾಗಿ ಎಲ್ಲಾ ಕಾಲೇಜುಗಳಲ್ಲೂ ಕಡ್ಡಾಯವಾಗಿ ರಾಷ್ಟ್ರೀಯ ಸೇವಾ ಯೋಜನಾ ಘಟಕಗಳನ್ನು ಪ್ರಾರಂಭಿಸುವಂತೆ ಸೂಚಿಸಲಾಗಿದೆ. ಈ ಸಂಬಂಧ, ಉಲ್ಲೇಖ-(1) ಮತ್ತು (2)ರ ಪತ್ರಗಳನ್ನು ಈ ಸುತ್ತೋಲೆಗೆ ಅನುಬಂಧಿಸಿದ್ದು, ಸದರಿ ಪತ್ರಗಳಲ್ಲಿನ ಮಾರ್ಗದರ್ಶನಗಳನ್ನು ಅನುಸರಿಸಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವಆರ್ಥಿಕ ಘಟಕಗಳನ್ನು ಸ್ಥಾಪಿಸಿ ನಿರ್ವಹಿಸುವಂತೆ ಸೂಚಿಸಲಾಗಿದೆ.

**(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

**ಕಾಲೇಜು ಶಿಕ್ಷಣ ನಿರ್ದೇಶಕರು**

**ಪ್ರತಿಯನ್ನು:**

1. ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಕಾಲೇಜುಗಳಿಗೆ.
2. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಗುಲ್ಬರ್ಗಾ.
3. ಡಾ:ಗಣನಾಥ ಶೆಟ್ಟಿ, ರಾಜ್ಯ ಎನ್.ಎಸ್.ಎಸ್. ಅಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ರಾಷ್ಟ್ರೀಯ ಸೇವಾ ಯೋಜನಾ ಕೋಶ,
4. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
5. ಕಛೇರಿ ಪ್ರತಿ.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಘಟಕ (ಎನ್.ಎಸ್.ಎಸ್.) ಗಳನ್ನು ಸ್ಥಾಪಿಸುವ ಬಗ್ಗೆ.

ಓದಲಾಗಿದೆ:
1. ರಾಜ್ಯ ಸಂಪರ್ಕಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ರಾಷ್ಟ್ರೀಯ ಸೇವಾ ಯೋಜನಾ ಕೋಶ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪತ್ರ ಸಂಖ್ಯೆ:ಯುಸೇಇ/ರಾಸೇಯೋ/06/2015-16/16, ದಿ:16.04.2015.
2. ಜಂಟಿ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಭಾರತ ಸರ್ಕಾರ ಇವರ ಪತ್ರ ಸಂಖ್ಯೆ:DD No.1-11020/2/2013-NSS, ದಿನಾಂಕ:28.01.2014.

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ ಕಾಲೇಜುಗಳಲ್ಲಿ ಸ್ವಆರ್ಥಿಕ ಎನ್.ಎಸ್.ಎಸ್. ಘಟಕಗಳನ್ನು ಸ್ಥಾಪಿಸುವಂತೆ ಕೇಂದ್ರ ಸರ್ಕಾರವು ಸಲಹೆ ನೀಡಿದೆ. ಕೇಂದ್ರ ಸರ್ಕಾರವು 2014-15ನೇ ಸಾಲಿನಲ್ಲಿ 2,70,000 ವಿದ್ಯಾರ್ಥಿ ಬಲವನ್ನು ಮಂಜೂರು ಮಾಡಿದೆ. ಅದರಲ್ಲಿ 1,10,000 ವಿದ್ಯಾರ್ಥಿ ಬಲವನ್ನು ವಿವಿಧ ನಿರ್ದೇಶನಾಲಯಗಳಿಗೆ ನೀಡಬೇಕಾಗುತ್ತದೆ. ಉಳಿದ 1,60,000 ಬಲವನ್ನು ವಿಶ್ವವಿದ್ಯಾನಿಲಯಗಳಿಗೆ ನೀಡಲಾಗುತ್ತಿದೆ. ರಾಜ್ಯದ ಒಟ್ಟು ವಿದ್ಯಾರ್ಥಿ ಸಂಖ್ಯೆಯ ಶೇಕಡ 30 ರಷ್ಟನ್ನು ಇದರಿಂದ ಮುಟ್ಟಲು ಸಾಧ್ಯವಾಗುವುದಿಲ್ಲ. ಕೆಲವು ವಿಶ್ವವಿದ್ಯಾನಿಲಯಗಳು ಈಗಾಗಲೇ ಎನ್.ಎಸ್.ಎಸ್‌ನ್ನು ಪರೀಕ್ಷಾ ಮೌಲ್ಯಮಾಪನಕ್ಕೂ ಅಳವಡಿಸಿಕೊಂಡಿದೆ. ಈ ದೃಷ್ಟಿಯಿಂದ ರಾಷ್ಟ್ರೀಯ ಸೇವಾ ಘಟಕಗಳನ್ನು ಸ್ಥಾಪಿಸಲು ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಕೇಂದ್ರ ಸರ್ಕಾರವು ನೀಡಿದ ಸಲಹೆಯನ್ನು ಅನುಷ್ಠಾನಗೊಳಿಸುವುದು ಅನಿವಾರ್ಯವಾಗಿದ್ದು, ವಿದ್ಯಾರ್ಥಿಗಳಿಂದ ಈ ಬಗ್ಗೆ ಶುಲ್ಕವನ್ನು ಸಂಗ್ರಹಿಸುವ ಸಲಹೆ ನೀಡಿದೆ.

1. ಎನ್.ಎಸ್.ಎಸ್. ಘಟಕ ಇಲ್ಲದ ಕಾಲೇಜುಗಳಲ್ಲಿ ಎಲ್ಲಾ ವಿದ್ಯಾರ್ಥಿಗಳಿಂದ ರೂ.50/-
2. ಒಂದು ಘಟಕ ಇರುವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ರೂ.40/-

ಕಾಲೇಜುಗಳಲ್ಲಿ ಘಟಕವನ್ನು ನಿರ್ವಹಿಸುವಾಗ ಈ ಕೆಳಗಿನ ನಿಯಮಗಳನ್ನು ಅನುಸರಿಸಬೇಕು:

1. ಸ್ವಆರ್ಥಿಕ ಘಟಕ ಸ್ಥಾಪನೆಯ ವಿಚಾರವನ್ನು ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್ ಕೋಶಕ್ಕೆ ಮಾಹಿತಿ ನೀಡುವುದು. ಯೋಜನಾಧಿಕಾರಿಯನ್ನು ನೇಮಿಸಿ ಆ ವಿವರವನ್ನು ಎನ್.ಎಸ್.ಎಸ್ ಕೋಶಕ್ಕೆ ನೀಡುವುದು.
2. ಘಟಕಗಳ ಚಟುವಟಿಕೆಗಳ ವಾರ್ಷಿಕ ಮತ್ತು ಅರ್ಧ ವಾರ್ಷಿಕ ವರದಿಯನ್ನು 2006ರ ಎನ್.ಎಸ್.ಎಸ್ ಕೈಪಿಡಿಯ ನಿಯಮದಂತೆ ಸಲ್ಲಿಸುವುದು.
3. ನಿಯಮದಂತೆ ಸಲಹಾ ಸಮಿತಿಯನ್ನು ರಚಿಸಿ ಅನುಮೋದನೆ ಪಡೆಯುವುದು. ಈಗಾಗಲೇ ಒಂದು ಘಟಕ ಇದ್ದಲ್ಲಿ ಅದೇ ಸಲಹಾ ಸಮಿತಿಯಲ್ಲಿ ಅನುಮೋದನೆ ಪಡೆಯಬಹುದು.
4. ವಿಶ್ವವಿದ್ಯಾನಿಲಯ ಎನ್.ಎಸ್.ಎಸ್ ಕೋಶಗಳು ಸ್ವಆರ್ಥಿಕ ಘಟಕಗಳ ಮಾಹಿತಿಯನ್ನು ರಾಜ್ಯ ಎನ್.ಎಸ್.ಎಸ್ ಕೋಶ ಮತ್ತು ಭಾರತ ಸರ್ಕಾರದ ಪ್ರಾದೇಶಿಕ ಕೇಂದ್ರಗಳಿಗೆ ನೀಡುವುದು.

5. ಸಂಗ್ರಹಿತ ಶುಲ್ಕದ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್ ಕೋಶದ ಮೂಲಕ ರಾಜ್ಯ ಕೋಶ ಹಾಗೂ ಪ್ರಾದೇಶಿಕ ಕೇಂದ್ರಕ್ಕೆ ತಿಳಿಸುವುದು. ಶುಲ್ಕದಿಂದ ಸಂಗ್ರಹವಾದ ಹಣವನ್ನು ವಿಶ್ವವಿದ್ಯಾನಿಲಯಗಳು ನೀಡುವ ಅನುದಾನವನ್ನು ಖರ್ಚು ಮಾಡುವ ರೀತಿಯಲ್ಲೇ ಖರ್ಚು ಮಾಡಿ ಭಾರತ ಸರ್ಕಾರದ ಎನ್.ಎಸ್.ಎಸ್ ಪ್ರಾದೇಶಿಕ ಕೇಂದ್ರಕ್ಕೆ ತಿಳಿಸುವುದು.
6. ಶುಲ್ಕ ಕುರಿತಾದ ಲೆಕ್ಕ ತಪಾಸಣೆಯನ್ನು ಹಾಗೂ ದಾಖಲೆಗಳನ್ನು ಇತರ ಅರೆ ಸರ್ಕಾರಿ ಖಾತೆಗಳಂತೆ ನಿರ್ವಹಿಸುವುದು.
7. ಕಾರ್ಯಕ್ರಮ ಅನುಷ್ಠಾನ ಮತ್ತು ಹಣದ ಬಳಕೆಯಲ್ಲಿ 2006ರ ಎನ್.ಎಸ್.ಎಸ್ ಕೈಪಿಡಿ ಮತ್ತು ಸ್ವಆರ್ಥಿಕ ಘಟಕ ಸ್ಥಾಪನೆಗೆ ಕೇಂದ್ರ ಸರ್ಕಾರ ನೀಡಿದ ನಿರ್ದೇಶನವನ್ನು ತಪ್ಪದೇ ಪಾಲಿಸುವುದು.
8. ಇತರ ಅನುದಾನ ಪಡೆದ ಘಟಕಗಳಂತೆ ವರ್ಷಾರಂಭದಲ್ಲಿ ವಿಶ್ವವಿದ್ಯಾನಿಲಯ ಕೋಶಕ್ಕೆ ನೋಂದಣಿ ಪಟ್ಟಿಯನ್ನು ಕಳುಹಿಸುವುದು ಹಾಗೂ ವಿಶ್ವವಿದ್ಯಾನಿಲಯವು ಒಂದು ವಿಶೇಷ ಶಿಬಿರ ಹಾಗೂ 240 ಗಂಟೆ ಪೂರೈಸಿದ ಸ್ವಯಂಸೇವಕರಿಗೆ ಪ್ರಮಾಣ ಪತ್ರವನ್ನು ನೀಡುವುದು.
9. ಯಾವುದೇ ಘಟಕ ಇಲ್ಲದ ಕಾಲೇಜುಗಳಲ್ಲಿ ಘಟಕ ಸ್ಥಾಪನೆ ನಂತರ ಶುಲ್ಕ ಸಂಗ್ರಹ ಹಣದಲ್ಲಿ ವಿಶೇಷ ಶಿಬಿರ ನಡೆಸಬಹುದು. ಘಟಕಗಳಿರುವ ಕಾಲೇಜುಗಳಲ್ಲಿ ಸ್ವಆರ್ಥಿಕ ಘಟಕದ ಸ್ವಯಂಸೇವಕರು ಉಳಿದವರಂತೆ ಯಾವುದೇ ಶಿಬಿರದಲ್ಲಿ ಭಾಗವಹಿಸಬಹುದು. ಅವರನ್ನು ವಿಶ್ವವಿದ್ಯಾನಿಲಯದ ಇತರ ಎನ್.ಎಸ್.ಎಸ್ ಸ್ವಯಂ ಸೇವಕರಿಗೆ ಸೌಲಭ್ಯವನ್ನು ಒದಗಿಸುವುದು.

ಈ ಮೇಲಿನ ಅಂಶಗಳನ್ನು ಪರಿಗಣಿಸಿ ಈ ಬಗ್ಗೆ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 11 ವಿವಿಧ 2015,**
**ಬೆಂಗಳೂರು, ದಿನಾಂಕ: 4ನೇ ಮೇ 2015.**

ಮೇಲೆ ವಿವರಸಿದ ಕಾರಣಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿನ ಎಲ್ಲಾ ಕಾಲೇಜುಗಳಲ್ಲಿ ಸ್ವಆರ್ಥಿಕ ಎನ್.ಎಸ್.ಎಸ್. ಘಟಕಗಳನ್ನು ಸ್ಥಾಪಿಸಿ, ನಿರ್ವಹಿಸುವ ಕುರಿತಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಭಾರತ ಸರ್ಕಾರ ಪತ್ರ ಸಂಖ್ಯೆ:DD No.1-11020/2/2013-NSS, ದಿನಾಂಕ:28.01.2014ರನ್ವಯ

1. ಎನ್.ಎಸ್.ಎಸ್. ಘಟಕ ಇಲ್ಲದ ಕಾಲೇಜುಗಳಲ್ಲಿ ಎಲ್ಲಾ ವಿದ್ಯಾರ್ಥಿಗಳಿಂದ ರೂ.50/–
2. ಒಂದು ಘಟಕ ಇರುವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ರೂ.40/–ಗಳ

ಶುಲ್ಕವನ್ನು ಕಾಲೇಜು ಪ್ರವೇಶಾತಿ ಶುಲ್ಕದಲ್ಲಿ ಒಳಪಡಿಸಿ ಕ್ರೋಢೀಕರಿಸಿ ಅದರ ಮೂಲಕ ರಾಜ್ಯದಲ್ಲಿನ ಕಾಲೇಜುಗಳಲ್ಲಿ ಸ್ವಆರ್ಥಿಕ ಎನ್.ಎಸ್.ಎಸ್. ಘಟಕಗಳನ್ನು ಸ್ಥಾಪಿಸಿ ಆಯಾ ಕಾಲೇಜುಗಳಲ್ಲಿಯೇ ನಿರ್ವಹಿಸುವಂತೆ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಆದೇಶಿಸಲಾಗಿದೆ.

1. ಎನ್.ಎಸ್.ಎಸ್. ಕೋಶ ಸ್ಥಾಪಿಸಿ, ಈ ಸಂಬಂಧ ಎನ್.ಎಸ್.ಎಸ್.ನ ಎಲ್ಲಾ ಕಾರ್ಯಚಟುವಟಿಕೆಗಳನ್ನು ನಿರ್ವಹಿಸತಕ್ಕದ್ದು.

......3

2. ಸದರಿ ಕೋಶದಲ್ಲಿನ ಹಣವನ್ನು ಎನ್.ಎಸ್.ಎಸ್. ಕಾರ್ಯಗಳಿಗೆ ಹೊರತಾಗಿ ಇನ್ನಾವುದೇ ಕಾರ್ಯಕ್ಕೆ ಬಳಸತಕ್ಕದ್ದಲ್ಲ.

3. ಸದರಿ ಕೋಶದ ಖಾತೆ ಮತ್ತು ವ್ಯವಹಾರಗಳನ್ನು ಆಯಾ ಹಣಕಾಸು ವರ್ಷದ ಕೊನೆಯ ಅವಧಿಯಲ್ಲಿ ಅಥವಾ ವರ್ಷದ ನಂತರದ 3 ತಿಂಗಳೊಳಗೆ ಪ್ರತ್ಯೇಕವಾಗಿ ಲೆಕ್ಕಪರಿಶೋಧನೆ ಮಾಡಿಸಿ ಸಂಬಂಧಿಸಿದ ಇಲಾಖೆಗಳಿಗೆ ವರದಿಸತಕ್ಕದ್ದು. ತಪ್ಪಿದ್ದಲ್ಲಿ ಸಂಬಂಧಿತ ಇಲಾಖೆಗಳು ಕಾನೂನಿನನ್ವಯ ಕ್ರಮವಹಿಸುವಂತೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ.ಎಲ್.ಸುಬ್ರಮಣ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ಸಾಮಾನ್ಯ-2)

04/5/15

**ಇವರಿಗೆ,**

1. ಮಹಾಲೇಖಪಾಲರು ಎ ಮತ್ತು ಇ, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು-560 001.
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು-560 001.
4. ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳು/ಕುಲಸಚಿವರು.
5. ಮುಖ್ಯಸ್ಥರು, ಭಾರತ ಸರ್ಕಾರದ ಎನ್.ಎಸ್.ಎಸ್. ಪ್ರಾದೇಶಿಕ ಕಛೇರಿ, ಬಸವನಗುಡಿ, ಬೆಂಗಳೂರು.
6. ರಾಜ್ಯ ಸಂಪರ್ಕಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ರಾಷ್ಟ್ರೀಯ ಸೇವಾ ಯೋಜನೆ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
7. ಸರ್ಕಾರದ ಉಪ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ಕಾಲೇಜು & ತಾಂತ್ರಿಕ ಶಿಕ್ಷಣ)
8. ಸರ್ಕಾರದ ಉಪ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು & ಸಮನ್ವಯ)
9. ಆಡಳಿತಾಧಿಕಾರಿಗಳು, ಎನ್.ಸಿ.ಸಿ. ಇಲಾಖೆ, ನಂ.08, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು-560 052.
10. ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರ ಆಪ್ತ ಕಾರ್ಯದರ್ಶಿ.
11. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಸೇವಾ ಯೋಜನಾ ಕೋಶ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಸಂಖ್ಯೆ: ಯುಸೇಇ/ರಾಸೇಯೋ/15/2015-16/96

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 31.07.2015

**ಸುತ್ತೋಲೆ**

ವಿಷಯ: ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಘಟಕಗಳನ್ನು ಸ್ಥಾಪಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ ಇಡಿ 11 ವಿವಿಧ 2015 ಬೆಂಗಳೂರು ದಿನಾಂಕ 04.05.2015.
2) ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯ ಸಲಹಾ ಸಮಿತಿಯ ನಡಾವಳಿ ದಿನಾಂಕ 25.06.2015.

***

ಭಾರತ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ನಿರ್ದೇಶನದನ್ವಯ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ಉಲ್ಲೇಖ (1)ರ ಆದೇಶದಂತೆ ಎಲ್ಲಾ ಕಾಲೇಜುಗಳಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಘಟಕಗಳನ್ನು ಕಡ್ಡಾಯಗೊಳಿಸಿದೆ. ಎನ್.ಎಸ್.ಎಸ್.ಘಟಕಗಳು ಇಲ್ಲದ ಕಾಲೇಜುಗಳಲ್ಲಿ ರೂ.50/- ಹಾಗೂ ಒಂದು ಘಟಕ ಇರುವ ಕಾಲೇಜುಗಳಲ್ಲಿ ರೂ.40/- ಶುಲ್ಕ ವಸೂಲಾತಿಗೆ ಸದರಿ ಆದೇಶದಲ್ಲಿ ತಿಳಿಸಲಾಗಿದೆ. ಅದರಂತೆ ಈ ಬಗ್ಗೆ ರಾಜ್ಯದ ಎಲ್ಲಾ ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳಿಗೆ ಸದರಿ ಆದೇಶ ಹಾಗೂ ಹಣವನ್ನು ಖರ್ಚು ಮಾಡುವ ಬಗ್ಗೆ ನಿರ್ದೇಶನವನ್ನು ನೀಡಲಾಗಿದೆ. ಸದರಿ ಆದೇಶದ ಸ್ಪಷ್ಟ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಉಲ್ಲೇಖ (2) ರಂತೆ ರಾಜ್ಯ ಮಟ್ಟದ ರಾಷ್ಟ್ರೀಯ ಸೇವಾ ಯೋಜನಾ ಸಲಹಾ ಸಮಿತಿಯು ಈ ಕೆಳಗಿನ ನಿರ್ಣಯಗಳನ್ನು ಕೈಗೊಂಡಿದೆ. ಉಲ್ಲೇಖ (1) ಮತ್ತು (2)ರಂತೆ ರಾಜ್ಯದ ಕಾಲೇಜುಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವಆರ್ಥಿಕ ಘಟಕಗಳನ್ನು ಸ್ಥಾಪಿಸಿ ನಿರ್ವಹಿಸಲು ಈ ಕೆಳಗಿನ ನಿರ್ದೇಶನಗಳನ್ನು ನೀಡಲಾಗಿದೆ.

1) ರಾಷ್ಟ್ರೀಯ ಸೇವಾ ಯೋಜನೆಯ ಕೈಪಿಡಿ ಹಾಗೂ ರಾಜ್ಯ ಸರ್ಕಾರದ ಆದೇಶಗಳ ಹಿನ್ನೆಲೆಯಲ್ಲಿ ಅನುದಾನ ಪಡೆದ ಕಾಲೇಜು ಘಟಕಗಳು ಖರ್ಚು ಮಾಡುವ ಮಾದರಿಯಲ್ಲಿ ಈ ಕೆಳಗಿನಂತೆ ಖರ್ಚು ವೆಚ್ಚವನ್ನು ನಿರ್ವಹಿಸಬಹುದು.

| | | |
|---|---|---|
| 1. | ಊಟ ಉಪಹಾರ | 61% |
| 2. | ಯೋಜನಾಧಿಕಾರಿಯ ಭತ್ಯೆ | 23% (ವರ್ಷಕ್ಕೆ ಗರಿಷ್ಠ 4800 ರೂಪಾಯಿಗಳಿಗೆ ಸೀಮಿತಗೊಳಿಸಿ) |
| 3. | ಸಾಗಾಟ ವೆಚ್ಚ | 7% |
| 4. | ಸಣ್ಣ ವಸ್ತುಗಳ ಖರೀದಿ | 5% |
| 5. | ಸಿಬ್ಬಂದಿ ಭತ್ಯೆ | 2% |
| 6. | ಇತರ ವೆಚ್ಚಗಳು | 2% |

2) ನೂರು ವಿದ್ಯಾರ್ಥಿಗಳಿರುವ 1 ಘಟಕ ಸ್ಥಾಪಿಸಿದಲ್ಲಿ ಗರಿಷ್ಠ 16000 ರೂಪಾಯಿಗಳನ್ನು ದೈನಂದಿನ ಶಿಬಿರಕ್ಕೆ ಹಾಗೂ ಗರಿಷ್ಠ 22500 ರೂಪಾಯಿಗಳನ್ನು ವಿಶೇಷ ವಾರ್ಷಿಕ ಶಿಬಿರಕ್ಕೆ ಖರ್ಚು ಮಾಡಬಹುದಾಗಿದೆ. ವಾರ್ಷಿಕ ಶಿಬಿರಕ್ಕೆ ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್.ಅನುದಾನವನ್ನು ಖರ್ಚು ಮಾಡುವ ಮಾದರಿಯಲ್ಲೇ ಖರ್ಚು ವೆಚ್ಚವನ್ನು ನಿರ್ವಹಿಸಬೇಕು.

3) ಕ್ರಮ ಸಂಖ್ಯೆ 2ರಂತೆ ಖರ್ಚು ಮಾಡಿ ಉಳಿದ ಹಣವನ್ನು ಕಾಲೇಜಿನ ಎಲ್ಲಾ ಘಟಕಗಳ ವಿಶೇಷ ಕಾರ್ಯಕ್ರಮಗಳಿಗೆ ಬಳಸಬಹುದಾಗಿದೆ.

4) ಒಂದು ಘಟಕವಿರುವ ಕಾಲೇಜು ಇನ್ನೊಂದು ಘಟಕವನ್ನು ಸ್ಥಾಪಿಸುವುದಿಲ್ಲವಾದರೆ ಯಾವುದೇ ಶುಲ್ಕವನ್ನು ವಸೂಲು ಮಾಡಬಾರದು. ಈಗಾಗಲೇ ವಸೂಲು ಮಾಡಿದ್ದಲ್ಲಿ ಈ ವರ್ಷದ ಮಟ್ಟಿಗೆ ಎನ್.ಎಸ್.ಎಸ್.ನ ವಿಶೇಷ ಕಾರ್ಯಕ್ರಮ ಮತ್ತು ಚಟುವಟಿಕೆಗಳಿಗೆ ಖರ್ಚು ಮಾಡಬಹುದು.

5) ಎರಡು ಘಟಕಗಳಿರುವ ಕಾಲೇಜುಗಳಲ್ಲಿ ಯಾವುದೇ ಶುಲ್ಕವನ್ನು ವಸೂಲು ಮಾಡಬಾರದು. ಈ ವರ್ಷದ ಮಟ್ಟಿಗೆ ವಸೂಲು ಮಾಡಿದ್ದಲ್ಲಿ ಸದರಿ ಹಣವನ್ನು ವಿಶೇಷ ಕಾರ್ಯಕ್ರಮಗಳಿಗೆ ಬಳಸಬಹುದು. ಮುಂದೆ ಯಾವುದೇ ಶುಲ್ಕವನ್ನು ವಸೂಲು ಮಾಡತಕ್ಕದಲ್ಲ.

...... 2

6. ವಿಶ್ವವಿದ್ಯಾನಿಲಯವು ಅನುದಾನವನ್ನು ನೀಡುವುದನ್ನು ಹೊರತುಪಡಿಸಿ ಸ್ವಆರ್ಥಿಕ ಘಟಕಗಳಿಗೆ ಬ್ಯಾಡ್ಜ್, ಡೈರಿ, ಸರ್ಟಿಫಿಕೇಟ್ ಇತ್ಯಾದಿಗಳನ್ನು ನೀಡಬೇಕು. ಎಲ್ಲಾ ಅನುದಾನಿ ಪಡೆಯುವ ಘಟಕಗಳಂತೆ ಸ್ವಆರ್ಥಿಕ ಘಟಕಗಳನ್ನು ಅಂಗೀಕರಿಸಬೇಕು. ಸಂಯೋಜನಾಧಿಕಾರಿಗಳು ಎಲ್ಲಾ ಮಾಹಿತಿಗಳನ್ನು ಈ ಘಟಕಗಳಿಗೂ ನೀಡಬೇಕು. ರಾಜ್ಯ ಮಟ್ಟದ ಕಾರ್ಯಕ್ರಮಗಳ ಹಾಗೂ ಪ್ರಶಸ್ತಿಗಳಿಗೆ ಸದರಿ ಘಟಕಗಳು ಅರ್ಹವಾಗಿರುತ್ತವೆ.

7. 200 ಕ್ಕೂ ಕಡಿಮೆ ವಿದ್ಯಾರ್ಥಿ ಸಂಖ್ಯೆಯಿರುವ ಕಾಲೇಜುಗಳಲ್ಲಿ 50 ವಿದ್ಯಾರ್ಥಿಗಳ ಘಟಕ ಹಾಗೂ 200ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಕಾಲೇಜುಗಳಲ್ಲಿ 100 ವಿದ್ಯಾರ್ಥಿಗಳ ಘಟಕಗಳನ್ನು ಸ್ಥಾಪಿಸಬಹುದು.

8. ಈಗಾಗಲೇ ಒಂದು ಘಟಕವಿರುವ ಕಾಲೇಜುಗಳಲ್ಲಿ ಇನ್ನೊಂದು ಸ್ವಆರ್ಥಿಕ ಘಟಕವನ್ನು ಸ್ಥಾಪಿಸಿದಲ್ಲಿ ಯಾವುದೇ ವಿಶೇಷ ಶಿಬಿರದಲ್ಲಿ ಭಾಗವಹಿಸಲು ಸ್ವಆರ್ಥಿಕ ಘಟಕದ ಸ್ವಯಂಸೇವಕರು ಅರ್ಹರಾಗುತ್ತಾರೆ. ಅಲ್ಲದೆ ಹತ್ತಿರದ ಯಾವುದೇ ಕಾಲೇಜಿನ ವಿಶೇಷ ಶಿಬಿರದಲ್ಲಿ ಕಾಲೇಜಿನ ಅನುಮತಿಯಿದ್ದಲ್ಲಿ ಸ್ವಆರ್ಥಿಕ ಘಟಕದ ಯಾವುದೇ ಸ್ವಯಂಸೇವಕರು ಭಾಗವಹಿಸಲು ಅರ್ಹರಾಗಿರುತ್ತಾರೆ.

9. ಸ್ವಆರ್ಥಿಕ ಘಟಕಗಳು ವಿಶ್ವವಿದ್ಯಾನಿಲಯಕ್ಕೆ ಅನುದಾನಿತ ಘಟಕಗಳಂತೆ ಕಾಲಕಾಲಕ್ಕೆ ಎಲ್ಲಾ ವರದಿಗಳನ್ನು ಸಲ್ಲಿಸಬೇಕು. ಸ್ವಆರ್ಥಿಕ ಘಟಕದ ಯೋಜನಾಧಿಕಾರಿಗಳು ಮೈಸೂರಿನ ಮುಕ್ತ ವಿಶ್ವವಿದ್ಯಾನಿಲಯ ಅಥವಾ ಇನ್ನಿತರ ಕಡೆ ನಡೆಯುವ ತರಬೇತಿ ಶಿಬಿರದಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

10. ಸಂಯೋಜನಾಧಿಕಾರಿಗಳು ಸ್ವಆರ್ಥಿಕ ಘಟಕದ ಯೋಜನಾಧಿಕಾರಿಗಳನ್ನು ಅನುದಾನಿತ ಘಟಕಗಳ ಯೋಜನಾಧಿಕಾರಿಗಳನ್ನು ಆಹ್ವಾನಿಸುವ ಎಲ್ಲಾ ಸಭೆ ಸಮಾರಂಭಗಳಿಗೆ ಆಹ್ವಾನಿಸತಕ್ಕದ್ದು.

11. ಸಂಯೋಜನಾಧಿಕಾರಿಗಳು ಸ್ವಆರ್ಥಿಕ ಘಟಕಗಳ ವಿವರಗಳನ್ನು ಪಡೆದು ರಾಜ್ಯ ರಾಷ್ಟ್ರೀಯ ಸೇವಾ ಯೋಜನಾ ಕೋಶ ಹಾಗೂ ಪ್ರಾದೇಶಿಕ ಕಛೇರಿಗೆ ಪ್ರತಿ ವರ್ಷ ಆಗಸ್ಟ್ 30 ರೊಳಗೆ ಸಲ್ಲಿಸತಕ್ಕದ್ದು.

12. ಸ್ವಆರ್ಥಿಕ ಘಟಕಗಳ ಮೇಲ್ವಿಚಾರಣೆಯ ಜವಾಬ್ದಾರಿ ವಿಶ್ವವಿದ್ಯಾನಿಲಯ / ನಿರ್ದೇಶನಾಲಯಗಳ ಸಂಯೋಜನಾಧಿಕಾರಿಗಳಿಗೆ ಸೇರುತ್ತದೆ.

13. ಎಲ್ಲಾ ಸ್ವಆರ್ಥಿಕ ಘಟಕಗಳು ಎನ್.ಎಸ್.ಎಸ್.ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಕೇಂದ್ರ ಸರ್ಕಾರದ 2006ರ ಕೈಪಿಡಿಯನ್ನು ಪಾಲಿಸತಕ್ಕದ್ದು.

14. ಉಲ್ಲೇಖ 1ರ ಆದೇಶದಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ.

ಈ ಮೇಲಿನ ನಿರ್ದೇಶನಗಳನ್ನು ಪಾಲಿಸಿ ಎಲ್ಲಾ ಸ್ವಆರ್ಥಿಕ ಘಟಕಗಳು ರಾಷ್ಟ್ರೀಯ ಸೇವಾ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕೋರಲಾಗಿದೆ.

(ಡಾ:ಗಣನಾಥ ಶೆಟ್ಟಿ),
ರಾಜ್ಯ ಸಂಪರ್ಕಾಧಿಕಾರಿ
ಮತ್ತು ಪದನಿಮಿತ್ತ ಜಂಟಿ ಕಾರ್ಯದರ್ಶಿಗಳು,
ರಾಷ್ಟ್ರೀಯ ಯೋಜನಾ ಕೋಶ,
ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಪ್ರತಿಗಳು:

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ. ಕರ್ನಾಟಕ ಸರ್ಕಾರ.
2. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
5. ಎಲ್ಲಾ ವಿಶ್ವವಿದ್ಯಾನಿಲಯ/ನಿರ್ದೇಶನಾಲಯಗಳ ಸಂಯೋಜನಾಧಿಕಾರಿಗಳಿಗೆ ಸದರಿ ಸುತ್ತೋಲೆಯನ್ನು ಎಲ್ಲಾ ಕಾಲೇಜಿನ ಪ್ರಾಂಶುಪಾಲರ ಗಮನಕ್ಕೆ ತರುವಂತೆ ಕೋರಿಕೆಯೊಂದಿಗೆ.